ರಾಜ್ಯದಲ್ಲಿನ ನೇಕಾರರು ಮತ್ತು ಕುಶಲಕರ್ಮಿಗಳ ಸಂಖ್ಯೆ

1534 - ಶ್ರೀ ರಾಜುಗೌಡ, (ಹನೂರು) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಜನ ನೇಕಾರರು ಮತ್ತು ಕುಶಲಕರ್ಮಿಗಳು ಇರುವರು.

ಆ) ಇವರುಗಳ ಕಲ್ಯಾಣಕ್ಕಾಗಿ ಸರ್ಕಾರವು ರೂಪಿಸಿರುವ ಕಾರ್ಯಕ್ರಮಗಳೇನು

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) 83,395 ನೇಕಾರರು

19,961 ಕುಶಲಕರ್ಮಿಗಳು

ಆ) ಕೈಮಗ್ಗ ನೇಕಾರರ ಕಲ್ಯಾಣಕ್ಕಾಗಿ ಕೆಳಕಂಡ ಕೇಂದ್ರ ಪುರಸ್ಕೃತ ಯೋಜನೆಗಳನ್ನು ರೂಪಿಸಲಾಗಿದೆ.

ಕೈಮಗ್ಗಗಳನ್ನು ಆಧುನೀಕರಿಸುವ ಯೋಜನೆ ಕಾರ್ಯಗಾರ ಯೋಜನೆ ಮಿತವ್ಯಯ ನಿಧಿ ಯೋಜನೆ, ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಯೋಜನೆ ಸಾಮೂಹಿಕ ವಿಮಾ ಯೋಜನೆ.

ಇದರ ಜೊತೆಗೆ ಕೆಳಕಂಡ ಕಲ್ಯಾಣ ಕ್ರಮಗಳನ್ನೂ ಸಹ ರಾಜ್ಯ ಸರ್ಕಾರ ಕೈಗೊಂಡಿದೆ.

ಅಭ್ಯರ್ಥಿಗಳನ್ನು ಡಿಪ್ಲೋಮಾ ಕೋರ್ಸ್‌ಗೆ ಕಳುಹಿಸುವುದು. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ತಾಂತ್ರಿಕತೆಯ ಪರಿಣತಿಯುಳ್ಳ ಅಧಿಕಾರಿಗಳನ್ನು ತಾಂತ್ರಿಕ ಸಲಹೆ ನೀಡಲು ಕೋ-ಆಪರೇಟಿವ್ ಸೊಸೈಟಿಗಳಿಗೆ ಎರವಲು ಸೇವೆ ಮೇಲೆ ಕಳುಹಿಸುವುದು ಬೆಂಗೂರಿನಲ್ಲಿರುವ ನೇಕಾರ ಸೇವಾ ಕೇಂದ್ರದಲ್ಲಿ ಹೊಸ ನಮೂನೆಗಳನ್ನು ಅಭಿವೃದ್ಧಿಪಡಿಸುವುದು, ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮದ ಮೂಲಕ ನೂಲನ್ನು ಮಿಲ್-ಗೇಟ್ ದರದಲ್ಲಿ ಸರಬರಾಜು ಮಾಡುವುದು, ಕಡಿಮೆ ದರ ಬಡ್ಡಿಯಲ್ಲಿ ದುಡಿಯುವ ಬಂಡವಾಳ ನೀಡುವುದು ಹಾಗೂ ರಾಜ್ಯ ಸರ್ಕಾರ ಸಾಲದ ಮತ್ತು ಅನುದಾನದ ರೂಪದಲ್ಲಿ ಬಣ್ಣದ ಮನೆ, ನೇಕಾರರಿಗೆ ಗೃಹ ನಿರ್ಮಾಣ, ಸಾಮೂಹಿಕ ನೇಯ್ಗೆ ಕೇಂದ್ರ, ಇತ್ಯಾದಿ ಯೋಜನೆಗಳಿಗೆ ನೆರವನ್ನು ಒದಗಿಸುತ್ತಿದೆ.

ಕುಶಲಕರ್ಮಿಗಳಿಗಾಗಿ ಕೆಳಕಂಡ ಕಲ್ಯಾಣ ಕ್ರಮಗಳನ್ನು ರೂಪಿಸಲಾಗಿದೆ.

ತಾಂತ್ರಿಕ ಸಲಹೆ ಹಾಗೂ ತರಬೇತಿ ನೀಡುವುದು. ಕಚ್ಚಾ ಸಾಮಗ್ರಿಗಳನ್ನು ಒದಗಿಸುವುದು. ಕರಕುಶಲ ವಸ್ತುಗಳ ಮಾರುಕಟ್ಟೆ ಮಳಿಗೆಗಳಿಂದ ಮಾರಾಟ ಮಾಡುವುದು, ಟ್ರೈಸ್ಕಂ ಯೋಜನೆಯಡಿಯಲ್ಲಿ ನೆರವು ನೀಡುವುದು ಹಾಗೂ ಸಾಮೂಹಿಕ ವಿಮಾ ಯೋಜನೆಯನ್ನು ಕುಶಲಕರ್ಮಿಗಳಿಗೂ ವಿಸ್ತರಿಸಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಆಗುತ್ತಿರುವ ಬಗ್ಗೆ.

1580 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮಂಡ್ಯ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ನಿಲುಗಡೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ

ಇ) ಗ್ರಾಮಾಂತರ ಪ್ರದೇಶದಲ್ಲಿ (ಮಂಡ್ಯ ಜಿಲ್ಲೆ) ವೋಲ್ಟೇಜ್ ತೊಂದರೆಯಿಂದ ಹಾಗೂ ವ್ಯತ್ಯಾಸದಿಂದ ರೈತರ ಪಂಪ್‌ಸೆಟ್ಟುಗಳು ನೀರು ಸರಬರಾಜು